ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक-संस्कृत-विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/09/ಹ.ಸ./2013–14/649-8

ದಿನಾಂಕ: 23.12.2013

ಮಾನ್ಯರೇ,

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **'ಹಣಕಾಸು ಸಮಿತಿ'** ಹನ್ನೆರಡನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 21.12.2013ರಂದು ಬೆಳಿಗ್ಗೆ 11.00 ಗಂಟೆಗೆ ಶಿಕ್ಷಣ ಇಲಾಖೆಯ ಸಭಾ ಕೊಠಡಿ, 6ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು –ಇಲ್ಲಿ ನಡೆಯಿತು. ಆ ಸಭೆಯ ನಡಾವಳಿಯನ್ನು ನಿಮ್ಮ ಅವಗಾಹನೆಗೆ ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಈ ಸಭೆಯ ನಡಾವಳಿಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪತ್ರ ತಲುಪಿದ ದಿನಾಂಕದಿಂದ ಹತ್ತು ದಿನಗಳೊಳಗಾಗಿ ಸಲ್ಲಿಸಲು ಕೋರಲಾಗಿದೆ.

**ಹಣಕಾಸು ಅಧಿಕಾರಿ**
ಹಣಕಾಸು ಅಧಿಕಾರಿಗಳು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು – 560018

**ಇವರಿಗೆ,**

1. **ಸರ್ಕಾರದ ಪ್ರಧಾನ ಕಾರ್ಯದರ್ಶಿ,** ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), 6ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು–560001.
2. **ಸರ್ಕಾರದ ಜಂಟಿ ಕಾರ್ಯದರ್ಶಿ,** ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ವಿಧಾನಸೌಧ, ಬೆಂಗಳೂರು–560001.
3. **ಪ್ರೊ. ಎನ್. ಅಶ್ವತ್ಥಮ್ಮ,** # 91, ಮೊದಲ ಮಹಡಿ, 9ನೇ ಕ್ರಾಸ್, 1ನೇ ಸ್ಟೇಜ್, ಗೋಕುಲಂ, ಮೈಸೂರು–570002.
4. **ಡಾ. ಪದ್ಮಾಶೇಖರ್,** 'ಪ್ರೀತಿ', ನಂ. 2921, 21ನೇ ಮುಖ್ಯರಸ್ತೆ, 3ನೇ ತಿರುವು (ದಕ್ಷಿಣ), ವಿಜಯನಗರ 2ನೇ ಹಂತ, ಹಿನಕಲ್, ಮೈಸೂರು – 570017.

**ಪ್ರತಿಗಳು:**

1. **ಕುಲಪತಿಗಳ ಆಪ್ತಶಾಖೆ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
2. **ಕುಲಸಚಿವರ ಕಾರ್ಯಾಲಯ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
3. ಕಛೇರಿ ಪ್ರತಿ
4. ✓ ರಕ್ಷತಾ ಪ್ರತಿ

ದೂರವಾಣಿ: 080 – 26701303 / 26705387; ಇ–ಮೇಲ್: karnatakasanskrituniversity@gmail.com
दूरवाणी: ०८०–२६७०१३०३; २६७०५३८७; ई–सङ्केत: – karnatakasanskrituniversity@gmail.com

## 2013ರ ಡಿಸೆಂಬರ್ 21ರಂದು ನಡೆಯುವ ಹಣಕಾಸು ಸಮಿತಿ ಹನ್ನೆರಡನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹಣಕಾಸು ಸಮಿತಿ ೧೨ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಡಿಸೆಂಬರ್ ೨೧, ೨೦೧೩ರ ಶನಿವಾರ ಮಧ್ಯಾಹ್ನ ೧೧.೦೦ ಗಂಟೆಗೆ ಶಿಕ್ಷಣ ಇಲಾಖೆಯ ಸಭಾ ಕೊಠಡಿ, ೬ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು ಇಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| 1. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಕುಲಪತಿಗಳು | ಅಧ್ಯಕ್ಷರು |
| 2. | **ಶ್ರೀ ಕೆ.ಆರ್. ಬಡಿಗೇರ್,** ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು | ಸದಸ್ಯರು |
| 3. | **ಪ್ರೊ. ಎನ್. ಅಶ್ವತ್ಥಮ್ಮ,** ಪ್ರಶಾಸನ ಸಭೆ ಸದಸ್ಯರು | ಸದಸ್ಯರು |
| 4. | **ಡಾ. ಪದ್ಮಾಶೇಖರ್,** ಪ್ರಶಿಕ್ಷಣ ಪರಿಷತ್ ಸದಸ್ಯರು | ಸದಸ್ಯರು |
| 5. | **ವಿದ್ವಾನ್ ಪಿ.ಆರ್. ಪಾಗೋಜಿ,** ಹಣಕಾಸು ಅಧಿಕಾರಿಗಳು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ (ವಿಶ್ವವಿದ್ಯಾಲಯ), ಬೆಂಗಳೂರು — ಸದಸ್ಯರು

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ದಿನಾಂಕ: 21.09.2013ರಂದು ನಡೆದ ಹಣಕಾಸು ಸಮಿತಿ 11ನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹಣಕಾಸು ಸಮಿತಿ 11ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 21.09.2013ರಂದು ನಡೆಯಿತು. ಈ ಸಭೆಯಲ್ಲಿ ಚರ್ಚಿತವಾದ ವಿಷಯ ಸಂಖ್ಯೆ 2ಕ್ಕೆ ಸಂಬಂಧಿಸಿದಂತೆ 2013–14ನೇ ಸಾಲಿನ ಪರಿಷ್ಕೃತ ಕ್ರಿಯಾ ಯೋಜನೆಯಂತೆ ಹಣಕಾಸಿನ ವ್ಯವಹಾರಗಳನ್ನು ನಡೆಸಲಾಗುತ್ತಿದೆ. ಮುಂದಿನ ಸಭೆಯಲ್ಲಿ ಆಯಾಯ ತಿಂಗಳ ವಿಶ್ವವಿದ್ಯಾಲಯದ ಒಟ್ಟು ಖರ್ಚುಗಳನ್ನು ತೋರಿಸಲು ಸೂಚಿಸಲಾಗಿತ್ತು. ಸರ್ಕಾರದಿಂದ ಬಂದ ವೇತನಾನುದಾನ ಪ್ರತ್ಯೇಕವಾಗಿ ಟಿಪ್ಪಣಿ ರೂಪದಲ್ಲಿ ಮಂಡಿಸಲು ಸೂಚಿಸಲಾಗಿತ್ತು.

ನಿರ್ಣಯ: **ಸಭೆಯು ಅನುಪಾಲನ ವರದಿಗೆ ತನ್ನ ಒಪ್ಪಿಗೆಯನ್ನು ನೀಡಿತು.**

**ವಿಷಯ 2: 2013–14ನೇ ಸಾಲಿನ 2013ನೇ ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳ ಆಯ–ವ್ಯಯಗಳ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2013–14ನೇ ಸಾಲಿನ 2013ನೇ ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳ ಹಣಕಾಸು ವ್ಯವಹಾರಗಳ ವಿವರಗಳು ಈ ಕೆಳಗಿನಂತಿವೆ.

**ಜುಲೈ 2013**

| ಜಮದ ಮೊತ್ತ | | | ಖರ್ಚಿನ ಮೊತ್ತ | | |
|---|---|---|---|---|---|
| ಕ್ರ.ಸಂ. | ಜಮದ ವಿವರ | ಮೊತ್ತ | ಕ್ರ.ಸಂ. | ಖರ್ಚಿನ ವಿವರ | ಮೊತ್ತ |
| 1 | ಜುಲೈ 1, 2013ಕ್ಕೆ ಪ್ರಾರಂಭಿಕ ಶಿಲ್ಕು | 27,900,774.00 | 1 | ವೇತನ | 1,095,455.00 |
| 2 | ಉಳಿಕೆ ಮೊತ್ತ / ನಗದು ಜಮೆ/ವರ್ಗಾವಣೆ | 43,245.00 | 2 | ಪಿಂಚಣಿ | 37,502.00 |
| 3 | ಡಿ.ಡಿ./ಚೆಕ್ | 58,350.00 | 3 | ಸಭೆ | 18,260.00 |
| 4 | ಪಿಎಚ್.ಡಿ. ಪ್ರವೇಶ ಪರೀಕ್ಷೆ ಶುಲ್ಕ | 600.00 | 4 | ಕಛೇರಿ ಸಾದಿಲ್ವಾರು | 5,000.00 |
| 5 | ಹುದ್ದೆ ನೇಮಕಾತಿ ಅರ್ಜಿ ಶುಲ್ಕ (ರಾಜ್ಯ ಮತ್ತು ಯುಜಿಸಿ ವೇತನಶ್ರೇಣಿ | 172,050.00 | 5 | ಅನುದಾನಿತ ಸಂಸ್ಕೃತ ಪಾಠಶಾಲೆ/ಕಾಲೇಜುಗಳ ವೇತನ | 32,625,641.00 |
| 6 | ಪಠ್ಯಪುಸ್ತಕಗಳ ಮಾರಾಟದ ಬಾಬ್ತು | 860.00 | 6 | ದೂರವಾಣಿ / ಇಂಟರ್‌ನೆಟ್ | 10,070.00 |
| 7 | ರದ್ದಿ ಕಾಗದ ಮಾರಾಟದ ಬಾಬ್ತು | 2,615.00 | 7 | ವಾಹನಗಳಿಗೆ ಇಂಧನ/ರಿಪೇರಿ/ಇನ್ಶೂರೆನ್ಸ್ | 55,810.00 |
| 8 | ಮಾಹಿತಿ ಹಕ್ಕು ಅಧಿನಿಯಮದಡಿ ಮಾಹಿತಿ ನೀಡಿದ ಶುಲ್ಕ | 1,060.00 | 8 | ಪ್ರಯಾಣಭತ್ಯೆ/ದಿನಭತ್ಯೆ | 1,815.00 |
| 9 | ಘಟಿಕೋತ್ಸವ ಪ್ರಮಾಣಪತ್ರ ಶುಲ್ಕ | 1,000.00 | 9 | ಪರೀಕ್ಷಾ ವೆಚ್ಚ | 88,839.00 |
| 10 | ಸರ್ಕಾರದ ಅನುದಾನ (ವಿಶ್ವವಿದ್ಯಾಲಯದ ಅಭಿವೃದ್ಧಿ ಅನುದಾನ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ, ಅನುದಾನಿತ ಸಂಸ್ಕೃತ ಕಾಲೇಜು–ಪಾಠಶಾಲೆಗಳ ವೇತನಾನುದಾನ) | 58,530,000.00 | 10 | ಕಾನೂನು ಸಲಹೆಗಾರರ ಸಂಭಾವನೆ/ವೃತ್ತಿ/ದಾವೆಗಳ ಸೇವಾ ಶುಲ್ಕ | 26,000.00 |

| | | | | | |
|---|---|---|---|---|---|
| 11 | ಕ್ರೋಢೀಕೃತ ಅಂಕಪಟ್ಟಿ ಶುಲ್ಕ | 1000.00 | 11 | ಲೇಖನಸಾಮಗ್ರಿ | 6,328.00 |
| 12 | ಮರುಮೌಲ್ಯಮಾಪನ ಶುಲ್ಕ | 7200.00 | 12 | ಎಂ.ಫಿಲ್. ವಿದ್ಯಾರ್ಥಿ ವೇತನ | 7,613.00 |
| 13 | TDS DED. REVSD | 3,500.00 | 13 | ವಿವಿ ಕಛೇರಿ ವಿದ್ಯುತ್ ಬಿಲ್ | 7,117.00 |
| | | | 14 | ಸಮಾರಂಭ/ಕಾರ್ಯಾಗಾರ/ವಿಚಾರಸಂಕಿರಣ/ ವಿಶೇಷೋಪನ್ಯಾಸ/ಸ್ಪರ್ಧೆಗಳು | 88,378.00 |
| | | | 15 | ಕುಲಪತಿಗಳ ಗೃಹಕಛೇರಿ ವೆಚ್ಚ | 5,000.00 |
| | | | 16 | ಚೆಕ್ ರಿಟರ್ನ್ / ಬ್ಯಾಂಕ್ ಚಾರ್ಜ್ | 602.00 |
| | | | 17 | ಕಂಪ್ಯೂಟರ್ ಮತ್ತು ಸಂಬಂಧಿತ ವಸ್ತುಗಳ ವಾರ್ಷಿಕ ನಿರ್ವಹಣೆ ವೆಚ್ಚ | 18,330.00 |
| | | | 18 | ಅಂಚೆ ಚೀಟಿ ಖರೀದಿ | 5,000.00 |
| | | | 19 | ಜಾಹೀರಾತು | 5,153.00 |
| | | | 20 | ಗೌರವ ಸಂದರ್ಶಕ ಪ್ರಾಧ್ಯಾಪಕರ ಸಂಭಾವನೆ | 30000.00 |
| | | | 21 | ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ | 15000.00 |
| | | | 22 | ಹುದ್ದೆ ನೇಮಕಾತಿ ಆಯ್ಕೆ ಸಮಿತಿ ಸಂದರ್ಶನದಲ್ಲಿ ಭಾಗವಹಿಸಿದ ವಿದ್ವಾಂಸರ ಪ್ರಯಾಣ/ದಿನ ಭತ್ಯೆ | 21599.00 |
| | | | 23 | ಎಂ.ಫಿಲ್. ಮೌಲ್ಯಮಾಪಕರ ಭತ್ಯೆ | 924.00 |
| | **ಜಮೆಗಳು** | **58,821,480.00** | | **ಪಾವತಿಗಳು** | **34,175,436.00** |
| | | | | **ಬ್ಯಾಂಕಿನಲ್ಲಿರುವ ಅಂತಿಮ ಶಿಲ್ಕು (31.07.2013ಕ್ಕೆ)** | **52,546,818.00** |
| | **ಒಟ್ಟು ಮೊತ್ತ** | **86,722,254.00** | | **ಒಟ್ಟು ಮೊತ್ತ** | **86,722,254.00** |

## ಆಗಸ್ಟ್ 2013

| ಜಮದ ಮೊತ್ತ | | | ಖರ್ಚಿನ ಮೊತ್ತ | | |
|---|---|---|---|---|---|
| ಕ್ರಸಂ. | ಜಮದ ವಿವರ | ಮೊತ್ತ | ಕ್ರಸಂ. | ಖರ್ಚಿನ ವಿವರ | ಮೊತ್ತ |
| 1 | ಆಗಸ್ಟ್ 1, 2013ಕ್ಕೆ ಪ್ರಾರಂಭಿಕ ಶಿಲ್ಕು | 52,546,818.00 | 1 | ವೇತನ | 2,255,387.00 |
| 2 | ಉಳಿಕೆ ಮೊತ್ತ / ನಗದು ಜಮೆ/ವರ್ಗಾವಣೆ | 68,810.00 | 2 | ಪಿಂಚಣಿ | 32,880.00 |
| 3 | ಡಿ.ಡಿ./ಚೆಕ್ | 109,790.00 | 3 | ಸಭೆ | 9,310.00 |
| 4 | ಎಂ.ಫಿಲ್ ಪ್ರವೇಶ ಪರೀಕ್ಷೆ ಶುಲ್ಕ | 5,100.00 | 4 | ಕಛೇರಿ ಸಾದಿಲ್ವಾರು | 15,000.00 |
| 5 | ಸಂಜೆ ಕಾಲೇಜು ಅರ್ಜಿ ಮತ್ತು ಪ್ರವೇಶ ಶುಲ್ಕ | 34,000.00 | 5 | ಅನುದಾನಿತ ಸಂಸ್ಕೃತ ಪಾಠಶಾಲೆ/ಕಾಲೇಜುಗಳ ವೇತನ | 885,965.00 |
| 6 | ಪಠ್ಯಪುಸ್ತಕಗಳ ಮಾರಾಟದ ಬಾಬ್ತು | 109,457.00 | 6 | ದೂರವಾಣಿ / ಇಂಟರ್‌ನೆಟ್ | 14,997.00 |
| 7 | ಮಾನ್ಯತಾ ಶುಲ್ಕ | 21,000.00 | 7 | ವಾಹನಗಳಿಗೆ ಇಂಧನ/ರಿಪೇರಿ/ಇನ್ಶೂರೆನ್ಸ್ | 37,619.00 |
| 8 | ಮಾಹಿತಿ ಹಕ್ಕು ಅಧಿನಿಯಮದಡಿ ಮಾಹಿತಿ ನೀಡಿದ ಶುಲ್ಕ | 621.00 | 8 | ಪ್ರಯಾಣಭತ್ಯೆ/ದಿನಭತ್ಯೆ | 12,165.00 |
| 9 | ಘಟಿಕೋತ್ಸವ ಪ್ರಮಾಣಪತ್ರ ಶುಲ್ಕ | 1,000.00 | 9 | ಪರೀಕ್ಷಾ ವೆಚ್ಚ | 19,506.00 |
| 10 | ಸರ್ಕಾರದ ಅನುದಾನ (ವಿದ್ಯಾರ್ಥಿವೇತನ ಮತ್ತು ಪ್ರೋತ್ಸಾಹಧನ) | 1,667,500.00 | 10 | ಕಾನೂನು ಸಲಹೆಗಾರರ ಸಂಭಾವನೆ/ವೃತ್ತಿ/ದಾವೆಗಳ ಸೇವಾ ಶುಲ್ಕ | 29,000.00 |
| 11 | ಕ್ರೋಢೀಕೃತ/ತಿದ್ದುಪಡಿ ಅಂಕಪಟ್ಟಿ ಶುಲ್ಕ | 3000.00 | 11 | ಲೇಖನಸಾಮಗ್ರಿ | |
| 12 | ವಿದ್ಯಾರ್ಥಿವೇತನ ಹಿಂತಿರುಗಿದ ಮೊತ್ತ | 1850.00 | 12 | ಎಂ.ಫಿಲ್. ವಿದ್ಯಾರ್ಥಿ ವೇತನ ಮತ್ತು ಉಪನ್ಯಾಸಕರ ಭತ್ಯೆ | 23,063.00 |
| 13 | TDS DED. REVSD | 15,016.00 | 13 | ವಿವಿ ಕಛೇರಿ ವಿದ್ಯುತ್ ಬಿಲ್ | 3,639.00 |
| 14 | ವಾರ್ತಾಪತ್ರಮ್, ಕರ್ನಾಟಕ ಸಂಸ್ಕೃತಾಧ್ಯಯನಮ್ ಮತ್ತು ಕರ್ನಾಟಕ ಸಾರಸ್ವತೋಪಾಸಕರು ಮಾಲೆ ಪುಸ್ತಕಗಳ ಮಾರಾಟದ ಬಾಬ್ತು | 3,505.00 | 14 | ಸಮಾರಂಭ/ಕಾರ್ಯಾಗಾರ/ವಿಚಾರಸಂಕಿರಣ / ವಿಶೇಷೋಪನ್ಯಾಸ/ಸ್ಪರ್ಧೆಗಳು | 100,661.00 |
| 15 | ಪರೀಕ್ಷಾ ಕೇಂದ್ರದ ಶುಲ್ಕ | 300.00 | 15 | ಕುಲಪತಿಗಳ ಗೃಹಕಛೇರಿ ವೆಚ್ಚ | 5,000.00 |
| 16 | ವಲಸೆ ಪ್ರಮಾಣಪತ್ರದ ಶುಲ್ಕ | 500.00 | 16 | ಚೆಕ್ ರಿಟರ್ನ್ / ಬ್ಯಾಂಕ್ ಚಾರ್ಜ್ | 400.00 |
| | | | 17 | ಕಂಪ್ಯೂಟರ್ ಮತ್ತು ಸಂಬಂಧಿತ ವಸ್ತುಗಳ ವಾರ್ಷಿಕ ನಿರ್ವಹಣೆ ವೆಚ್ಚ | 15,423.00 |
| | | | 18 | ಮುದ್ರಣ ವೆಚ್ಚ | 469,253.00 |
| | **ಜಮೆಗಳು** | **2,041,449.00** | | **ಪಾವತಿಗಳು** | **3,929,268.00** |
| | | | | **ಬ್ಯಾಂಕಿನಲ್ಲಿರುವ ಅಂತಿಮ ಶಿಲ್ಕು (31.08.2013ಕ್ಕೆ)** | **50,658,999.00** |
| | **ಒಟ್ಟು ಮೊತ್ತ** | **54,588,267.00** | | **ಒಟ್ಟು ಮೊತ್ತ** | **54,588,267.00** |

## ಸೆಪ್ಟೆಂಬರ್ 2013

| ಜಮದ ಮೊತ್ತ | | | ಖರ್ಚಿನ ಮೊತ್ತ | | |
|---|---|---|---|---|---|
| ಕ್ರ.ಸಂ. | ಜಮದ ವಿವರ | ಮೊತ್ತ | ಕ್ರ.ಸಂ. | ಖರ್ಚಿನ ವಿವರ | ಮೊತ್ತ |
| 1 | ಸೆಪ್ಟೆಂಬರ್ 1, 2013ಕ್ಕೆ ಪ್ರಾರಂಭಿಕ ಶಿಲ್ಕು | 50,658,999.00 | 1 | ವೇತನ | 1,216,985.00 |
| 2 | ಉಳಿಕೆ ಮೊತ್ತ / ನಗದು ಜಮೆ/ವರ್ಗಾವಣೆ | 9,842.00 | 2 | ಪಿಂಚಣಿ | 32,880.00 |
| 3 | ಡಿ.ಡಿ./ಚೆಕ್ | 76,565.00 | 3 | ಸಭೆ | 25,330.00 |
| 4 | ಎಂ.ಫಿಲ್ ಪದವಿ ಶುಲ್ಕ | 22,500.00 | 4 | ಕಛೇರಿ ಸಾದಿಲ್ವಾರು | 10,000.00 |
| 5 | ಪಿಎಚ್.ಡಿ. ಪದವಿ ಶುಲ್ಕ | 153,750.00 | 5 | ಪೀಠೋಪಕರಣಗಳ ವೆಚ್ಚ | 36,975.00 |
| 6 | ಸಂಜೆ ಕಾಲೇಜು ಅರ್ಜಿ ಮತ್ತು ಪ್ರವೇಶ ಶುಲ್ಕ | 34,000.00 | 6 | ಅನುದಾನಿತ ಸಂಸ್ಕೃತ ಪಾಠಶಾಲೆ/ಕಾಲೇಜುಗಳ ವೇತನ | 31,675,555.00 |
| 7 | ಪಠ್ಯಪುಸ್ತಕಗಳ ಮಾರಾಟದ ಬಾಬ್ತು | 163,312.00 | 7 | ದೂರವಾಣಿ / ಇಂಟರ್‌ನೆಟ್ | 11,246.00 |
| 8 | ಮಾನ್ಯತಾ ಶುಲ್ಕ | 8,000.00 | 8 | ವಾಹನಗಳಿಗೆ ಇಂಧನ/ರಿಪೇರಿ/ಇನ್ಶೂರೆನ್ಸ್ | 28,441.00 |
| 9 | ಸಭಾಂಗಣ ಕಾಯ್ದಿರಿಸಿದ ಮುಂಗಡದ ಮೊತ್ತ | 2,730.00 | 9 | ಪ್ರಯಾಣಭತ್ಯೆ/ದಿನಭತ್ಯೆ | 13,640.00 |
| 10 | ಪರೀಕ್ಷಾ ಕೇಂದ್ರದ ಶುಲ್ಕ | 300.00 | 10 | ಪರೀಕ್ಷಾ ವೆಚ್ಚ | 11,605.00 |
| 11 | ಸರ್ಕಾರದ ಅನುದಾನ (ಅನುದಾನಿತ ಸಂಸ್ಕೃತ ಕಾಲೇಜು ಮತ್ತು ಪಾಠಶಾಲೆಗಳ ವೇತನಾನುದಾನ) | 49,075,000.00 | 11 | ಕಾನೂನು ಸಲಹೆಗಾರರ ಸಂಭಾವನೆ/ವೃತ್ತಿ/ದಾವೆಗಳ ಸೇವಾ ಶುಲ್ಕ | 10,000.00 |
| 12 | ಕ್ರೋಢೀಕೃತ/ತಿದ್ದುಪಡಿ/ತಾತ್ಕಾಲಿಕ ಅಂಕಪಟ್ಟಿ ಶುಲ್ಕ | 7000.00 | 12 | ಲೇಖನಸಾಮಗ್ರಿ | 19,966.00 |
| 13 | ಮರುಮೌಲ್ಯಮಾಪನ ಶುಲ್ಕ | 500.00 | 13 | ಎಂ.ಫಿಲ್. ವಿದ್ಯಾರ್ಥಿ ವೇತನ ಮತ್ತು ಉಪನ್ಯಾಸಕರ ಭತ್ಯೆ | 7,892.00 |
| 14 | TDS DED. REVSD | 12,896.00 | 14 | ವಿವಿ ಕಛೇರಿ ವಿದ್ಯುತ್ ಬಿಲ್ | 3,588.00 |
| 15 | ಪ್ರಸಾರಾಂಗ ಪ್ರಕಟಿಸಿದ ಪುಸ್ತಕಗಳ ಮಾರಾಟದ ಬಾಬ್ತು | 480.00 | 15 | ಸಮಾರಂಭ/ಕಾರ್ಯಾಗಾರ/ವಿಚಾರಸಂಕಿರಣ/ ವಿಶೇಷೋಪನ್ಯಾಸ/ಸ್ಪರ್ಧೆಗಳು | 17,658.00 |
| | | | 16 | ಕುಲಪತಿಗಳ ಗೃಹಕಛೇರಿ ವೆಚ್ಚ | 5,000.00 |
| | | | 17 | ಚೆಕ್ ರಿಟರ್ನ್ / ಬ್ಯಾಂಕ್ ಚಾರ್ಜ್ | 200.00 |
| | | | 18 | ಗೌರವ ಸಂದರ್ಶಕ ಪ್ರಾಧ್ಯಾಪಕರ ಸಂಭಾವನೆ | 30,000.00 |
| | | | 19 | ಹೊರಗುತ್ತಿಗೆ ಸಿಬ್ಬಂದಿ ವೇತನ | 11,720.00 |
| | | | 20 | ಪಿಚ್.ಡಿ. ಪದವಿ ಶುಲ್ಕ ಹಿಂತಿರುಗಿಸಿದ ಬಾಬ್ತು | 9,000.00 |
| | | | 21 | ಅರೆಕಾಲಿಕ ಉಪನ್ಯಾಸಕರ ವೇತನ | 7,500.00 |
| | | | 22 | ಕಛೇರಿಗೆ ವಿದ್ಯುತ್ ಉಪಕರಣಗಳನ್ನು ಅಳವಡಿಸಿದ ಬಾಬ್ತು | 26,505.00 |
| | | | 23 | ಮುದ್ರಣ ವೆಚ್ಚ | 347,833.00 |
| | | | 24 | ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಅನುದಾನವನ್ನು ಸ್ಥಿರನಿಧಿ ಠೇವಣಿ ಇರಿಸಿದ ಬಾಬ್ತು | 5,830,000.00 |
| | **ಜಮೆಗಳು** | **49,566,875.00** | | **ಪಾವತಿಗಳು** | **39,389,519.00** |
| | | | | **ಬ್ಯಾಂಕಿನಲ್ಲಿರುವ ಅಂತಿಮ ಶಿಲ್ಕು (30.09.2013ಕ್ಕೆ)** | **60,836,355.00** |
| | **ಒಟ್ಟು ಮೊತ್ತ** | **100,225,874.00** | | **ಒಟ್ಟು ಮೊತ್ತ** | **100,225,874.00** |

ಮೇಲಿನ ಆಯ-ವ್ಯಯಗಳಿಗೆ ಸಂಬಂಧಿಸಿದಂತೆ ಹಣಕಾಸು ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ: **ಸಭೆಯು 2013-14ನೇ ಸಾಲಿನ ಎರಡನೇ ತ್ರೈಮಾಸಿಕ (2013ನೇ ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್) ಖರ್ಚು-ವೆಚ್ಚಗಳ ಸಂಪೂರ್ಣ ವಿವರಗಳನ್ನು ಪರಿಶೀಲಿಸಿತು. ಪ್ರತಿ ತಿಂಗಳು ವೇತನಾನುದಾನ ಹೊರತುಪಡಿಸಿ ವಿಶ್ವವಿದ್ಯಾಲಯವು ವಿವಿಧ ಖರ್ಚುಗಳಿಗೆ ಮಾಡುತ್ತಿರುವ ಅಭಿವೃದ್ಧಿ ಅನುದಾನದ ಬಳಕೆಯು ಸಮರ್ಪಕವಾಗಿರುವುದನ್ನು ಪ್ರಶಂಸಿಸಿತು. ಎಲ್ಲಾ ವೆಚ್ಚಗಳಿಗೂ ಅನುಮೋದನೆಯನ್ನು ನೀಡಿತು.**

**ವಿಷಯ 3: ವಿವಿಧ ಪತ್ರಿಕೆಗಳಲ್ಲಿ ವಿಶ್ವವಿದ್ಯಾಲಯದ ಜಾಹೀರಾತುಗಳನ್ನು ಪ್ರಕಟಿಸಿದ ವೆಚ್ಚಕ್ಕೆ ಘಟನೋತ್ತರ ಅನುಮೋದನೆ ಬಗೆಗೆ.**

ಟಿಪ್ಪಣಿ: ವಿಶ್ವವಿದ್ಯಾಲಯವು ಹೊಸದಾಗಿ ರೂಪಿಸಿ ಮುದ್ರಿಸಿರುವ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ತರಗತಿಗಳ ಪ್ರಥಮ ವರ್ಷದ ಪಠ್ಯಪುಸ್ತಕಗಳ ಬಗೆಗೆ **'ಸಂಭಾಷಣ ಸಂದೇಶ'** ಸಂಸ್ಕೃತ ಮಾಸಪತ್ರಿಕೆಯ ನವೆಂಬರ್ 2013ರ ಸಂಚಿಕೆಯಲ್ಲಿ ಅರ್ಧಪುಟದ ವರ್ಣಮಯ ಜಾಹೀರಾತನ್ನು ಪ್ರಕಟಿಸಲಾಗಿತ್ತು. ಇದರ ಬಾಬ್ತು ರೂ. 6500/-ಗಳನ್ನು ಪಾವತಿಸಲಾಗಿದೆ.

ವಿಶ್ವವಿದ್ಯಾಲಯವು ಪ್ರಸಾರಾಂಗದ ವತಿಯಿಂದ ಪ್ರಕಟಿಸಿರುವ ಪ್ರಕಟಣೆಗಳು ಹಾಗೂ ಹೊಸದಾಗಿ ರೂಪಿಸಿ ಮುದ್ರಿಸಿರುವ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ತರಗತಿಗಳ ಪ್ರಥಮ ವರ್ಷದ ಪಠ್ಯಪುಸ್ತಕಗಳ ಬಗೆಗೆ **'ಸೂರ್ಯಕಿರಣ'** ಕನ್ನಡ ಮಾಸಪತ್ರಿಕೆ(ಸಂಪುಟ–6; ಸಂಚಿಕೆ–12; ನವೆಂಬರ್ 2013)ಯಲ್ಲಿ ಒಂದು ಪುಟದ ಕಪ್ಪುಬಿಳುಪಿನ ಜಾಹೀರಾತನ್ನು ಪ್ರಕಟಿಸಲಾಗಿತ್ತು. ಇದರ ಬಾಬ್ತು ರೂ. 5000/–ಗಳನ್ನು ಪಾವತಿಸಲಾಗಿದೆ.

ಜಾಹೀರಾತು ಪ್ರಕಟಣೆಗಾಗಿ ಬಾಬ್ತು **ಒಟ್ಟು ರೂ. 11500/–** (ಹನ್ನೊಂದು ಸಾವಿರದ ಐದು ನೂರು ರೂಪಾಯಿ ಮಾತ್ರ)ಗಳನ್ನು ವೆಚ್ಚ ಮಾಡಲಾಗಿದ್ದು, ಈ ವೆಚ್ಚಕ್ಕೆ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಜಾಹೀರಾತು ಪ್ರಕಟಣೆಗಾಗಿ ವೆಚ್ಚ ಮಾಡಲಾದ ಒಟ್ಟು ಮೊತ್ತಕ್ಕೆ ಘಟನೋತ್ತರ ಅನುಮೋದನೆಯನ್ನು ನೀಡಿತು.**

**ವಿಷಯ 4: ಕಂಪ್ಯೂಟರ್ ಆಪರೇಟರ್ ಮತ್ತು ಟೆಲಿಫೋನ್ ಆಪರೇಟರ್ ಹುದ್ದೆಗಳ ನೇಮಕಕ್ಕೆ ಸಂಬಂಧಿಸಿದ ವೃಂದ ಮತ್ತು ನೇಮಕಾತಿ ಪರಿನಿಯಮದಲ್ಲಿನ ವಿದ್ಯಾರ್ಹತೆಯನ್ನು ತಿದ್ದುಪಡಿ ಮಾಡುವ ಬಗೆಗೆ.**

ಟಿಪ್ಪಣಿ: ಕಂಪ್ಯೂಟರ್ ಆಪರೇಟರ್ ಮತ್ತು ಟೆಲಿಫೋನ್ ಆಪರೇಟರ್ ಹುದ್ದೆಗಳ ನೇಮಕಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ಪರಿನಿಯಮದಲ್ಲಿ ವಿದ್ಯಾರ್ಹತೆಗಳನ್ನು ನಿಗದಿಪಡಿಸಿಕೊಳ್ಳಲಾಗಿದೆ. ಆದರೆ, ಆ ನಿಯಮಗಳಂತೆ ಮೇಲ್ಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ದೊರೆಯದ ಹಿನ್ನೆಲೆಯಲ್ಲಿ ಮತ್ತು ಟೆಲಿಫೋನ್ ಆಪರೇಟರ್ ಹುದ್ದೆಗೆ ನಿಗದಿಪಡಿಸಿದ ಕಂಃಫಿ ತರಬೇತಿಯನ್ನು ಕರ್ನಾಟಕ ರಾಜ್ಯ ತಾಂತ್ರಿಕ ಶಿಕ್ಷಣ ಸಂಸ್ಥೆಯು ನೀಡುತ್ತಿಲ್ಲದ ಕಾರಣ ಈ ಕೆಳಗಿನಂತೆ ವೃಂದ ಮತ್ತು ನೇಮಕಾತಿ ಪರಿನಿಯಮಕ್ಕೆ ತಿದ್ದುಪಡಿಯನ್ನು ಮಾಡಿ ಸರ್ಕಾರದಿಂದ ಅನುಮೋದನೆಯನ್ನು ಪಡೆಯಬಹುದಾಗಿದೆ.

| ಕ್ರ. ಸಂ. | ಹುದ್ದೆಯ ಪದನಾಮ ಮತ್ತು ವೇತನಶ್ರೇಣಿ | ಹುದ್ದೆಗಳ ಸಂಖ್ಯೆ | ಮೀಸಲಾತಿ ಬಿಂದು | ವೃಂದ ಮತ್ತು ನೇಮಕಾತಿ ನಿಯಮ | ಬದಲಾವಣೆ ಆಗಬೇಕಾದ ವಿವರ |
|---|---|---|---|---|---|
| 01 | ಕಂಪ್ಯೂಟರ್ ಆಪರೇಟರ್ ರೂ. 21600–40050 | 01 | ಮೀಸಲು ರಹಿತ | Must be a holder of I Class BE in Computer Science from a recognized University or Diploma in Computer Science awarded by Karnataka Technical Examination Board with 5 years experience in Data Entry or 5 years experience in the post of Computer. **Vidwath Degree in any Traditional System in the field of specialization.** | Must be a holder of I Class BE in Computer Science from a recognized University or Diploma in Computer Science awarded by Karnataka Technical Examination Board with 5 years experience in Data Entry or 5 years experience in the post of Computer. **Also passed Sanskrit Sahitya Pariksha in Traditional System.** |
| 02 | ಟೆಲಿಫೋನ್ ಆಪರೇಟರ್ ರೂ. 11600–21000 | 01 | ಪರಿಶಿಷ್ಟ ಜಾತಿ (ಅಂಗ ವಿಕಲ) | Must have passed SSLC or equivalent examination. **Should have studied Sanskrit Language in SSLC. Must have undergone training in PABX.** Preference given to physically challenged. | Must have passed SSLC or equivalent examination. **Should have studied Sanskrit Language in SSLC or passed in Samskrit Kavya examination. Must have 3 years experience in the post of Receptionist.** Preference given to physically challenged. |

ಮೇಲಿನಂತೆ ತಿದ್ದುಪಡಿಯನ್ನು ಮಾಡಲು ಹಣಕಾಸು ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ತಿದ್ದುಪಡಿ ಮಾಡಿದ ಕಂಪ್ಯೂಟರ್ ಆಪರೇಟರ್ ಮತ್ತು ಟೆಲಿಫೋನ್ ಆಪರೇಟರ್ ಹುದ್ದೆಗೆ ಬೇಕಾಗುವ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ಒಪ್ಪಿಗೆ ನೀಡಿ, ವೃಂದ ಮತ್ತು ನೇಮಕಾತಿ ತಿದ್ದುಪಡಿಗೆ ಸರ್ಕಾರಕ್ಕೆ ಸಲ್ಲಿಸಿ ಕ್ರಮವಹಿಸಲು ಅನುಮೋದನೆ ನೀಡಿತು.**

**ವಿಷಯ 5: ಸಂಸ್ಕೃತ ಪಾಠಶಾಲೆಗಳ ಪ್ರಥಮಾ ಹಾಗೂ ಕಾವ್ಯ ತರಗತಿಗಳಿಗೆ ಬೋಧಿಸುತ್ತಿರುವ ಶಿಕ್ಷಕರಿಗೆ ತರಬೇತಿ ವೇತನಶ್ರೇಣಿಯಲ್ಲಿ ವೇತನ ನಿಗದಿಗೊಳಿಸುವುದಕ್ಕೆ ಅನುಮೋದನೆ ನೀಡುವ ಬಗೆಗೆ.**

ಟಿಪ್ಪಣಿ: ಈಗಾಗಲೇ ಸಂಸ್ಕೃತ ಪಾಠಶಾಲೆಗಳಲ್ಲಿ ಪ್ರಥಮಾ ಮತ್ತು ಕಾವ್ಯ ತರಗತಿಗಳನ್ನು ಭೋಧಿಸುತ್ತಿರುವ ಶಿಕ್ಷಕರುಗಳಿಗೆ ತರಬೇತಿ ವೇತನ ಶ್ರೇಣಿಯನ್ನು ದಿನಾಂಕ: 16.05.2012ರ 4ನೇ ಪ್ರಶಾಸನ ಸಮಿತಿಯ ಹಾಗೂ ಹಣಕಾಸು ಸಮಿತಿ 8ನೇ ಸಭೆಯ

ಅನುಮೋದನೆಯಂತೆ ಒಂದನೇ ಹಂತದಲ್ಲಿ ಬಿ.ಇಡಿ, ಟಿ.ಸಿ.ಹೆಚ್, ಶಿಕ್ಷಾಶಾಸ್ತ್ರಿ ತರಬೇತಿ ಹೊಂದಿದ 60 ಶಿಕ್ಷಕರಿಗೆ ವೇತನ ಶ್ರೇಣಿ ನೀಡಲಾಗಿದೆ. ಎರಡನೇ ಹಂತದಲ್ಲಿ ದಿನಾಂಕ: 08.05.2013ರ ಹಣಕಾಸು ಸಮಿತಿ 10ನೇ ಸಭೆಯ ಅನುಮೋದನೆಯಂತೆ ಹಿಂದೀಶಿಕ್ಷಕ್, ಶಿಕ್ಷಸ್ನಾತಕ್, ಹಿಂದೀ ಬಿ.ಇಡಿ, ತರಬೇತಿ ಹೊಂದಿದ 18 ಜನ ಶಿಕ್ಷಕರಿಗೆ ತರಬೇತಿ ವೇತನ ನೀಡಲಾಗಿದೆ. ಇದರನ್ವಯ ಮೂರನೇ ಹಂತದಲ್ಲಿ ಈ ಕೆಳಕಂಡ 07 ಸಂಸ್ಕೃತ ಪಾಠಶಾಲೆಗಳ 12 ಜನ ಶಿಕ್ಷಕರುಗಳಿಗೆ ತರಬೇತಿ ವೇತನ ಶ್ರೇಣಿಯನ್ನು ದಿನಾಂಕ: 11.11.2013ರ ಪ್ರಶಾಸನ ಸಮಿತಿಯ 17ನೇ ಸಭೆಯ ಅನುಮೋದನೆ ಪಡೆದು ಹಣಕಾಸು ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ವಿವರಗಳನ್ನು ಪರಿಶೀಲಿಸಿತು. ಏಳು ಪಾಠಶಾಲೆಗಳ ಹನ್ನೆರಡು ಶಿಕ್ಷಕರುಗಳಿಗೆ ತಗಲುವ ತರಬೇತಿ ವೇತನಶ್ರೇಣಿಯ ಹೆಚ್ಚುವರಿ ಮೊತ್ತಕ್ಕೆ ಸಭೆಯು ಅನುಮೋದನೆಯನ್ನು ನೀಡಿತು.**

| | |
|---|---|
| **ವಿದ್ವಾನ್ ಪಿ.ಆರ್. ಪಾಗೋಜಿ** | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ** |
| ಹಣಕಾಸು ಅಧಿಕಾರಿ | ಅಧ್ಯಕ್ಷರು |